ರಾಜೀವ ನಾರಾಯಣ ನಾಯಕ

# ಗಿಳಿಯು ಪಂಜರದೊಳಿಲ್ಲ





ಒಂದಾನೊಂದು ಕಾಲದಲ್ಲಿ ವಿಜಯಶೇಖರ ಎಂಬ ರಾಜನು ಭರತ ಖಂಡವನ್ನು ಆಳುತ್ತಿದ್ದನು. ಮಹಾ ಪರಾಕ್ರಮಿಯಾದ ಆ ರಾಜನು ಅಷ್ಟದಿಕ್ಕುಗಳಿಗೂ ದಂಡೆತ್ತಿ ಹೋಗಿ ಸಕಲ ರಾಜ್ಯಗಳನ್ನೂ ಗೆದ್ದು ವೀರಾಧಿವೀರ, ಅರಿಕೇಸರಿ, ಭುವನೇಶ್ವರ ಎಂಬ ಬಿರುದುಗಳಿಗೆ ಪಾತ್ರನಾಗಿದ್ದನು. ಹಲವು ರಾಜರು ಯುದ್ಧಕ್ಕಿಂತ ಮೊದಲೇ ಶರಣು ಬಂದು ವಿಜಯಶೇಖರನಿಗೆ ಕಪ್ಪಕಾಣಿಕೆಗಳನ್ನು ನೀಡಿ ತಮ್ಮ ರಾಜಕುಮಾರಿಯರನ್ನು ವಿವಾಹ ಮಾಡಿಕೊಟ್ಟಿದ್ದರು. ಅಂತೆಯೇ ವಿಜಯಶೇಖರನ ಅರಮನೆಯು ಸುರಸುಂದರಿಯರಿಂದ ತುಂಬಿ ತುಳುಕುವಂತಾಯಿತು. ತನ್ನ ಚಪ್ಪನ್ನೈವತ್ತಾರು ರಾಣಿಯರಲ್ಲಿ ವಿಜಯಶೇಖರ ಮಹಾರಾಜನಿಗೆ ಅತ್ಯಂತ ಕಿರಿಯ ರಾಣಿಯ ಮೇಲೆ ಅತೀವ ಮೋಹ. ಆಸ್ಥಾನದಲ್ಲಿ ರಾಜಕೀಯ ಸಮಾಲೋಚನೆಗಳು ಸಮಾರೋಪಗೊಂಡ ತರುವಾಯ ಹೆಚ್ಚು ಹೆಚ್ಚು ಸಮಯವನ್ನು ಅವಳ ಸಾನಿಧ್ಯದಲ್ಲೇ ಕಳೆಯುತ್ತಿದ್ದನು. ಅವಳನ್ನು ಸದಾ ಸಂತೋಷಪಡಿಸಲು ಯಾವುದಕ್ಕೂ ಸಿದ್ಧನಿದ್ದನು. ತಾನು ಕೈಗೊಂಡ ಯುದ್ಧಗಳಲ್ಲಿಯ ಪ್ರತಾಪವನ್ನು ರೋಚಕವಾಗಿ ವರ್ಣಿಸಿಕೊಂಡು ಅವಳ ಮನ ಸೆಳೆಯುತ್ತಿದ್ದನು. ಆದರೆ ಹಳೆಯ ಯುದ್ಧಗಳ ಸಾಹಸಗಾಥೆ ಅದೆಷ್ಟು ದಿನ ನವಿರೇಳಿಸೀತು? ರಾಜನಿಗೇ ಅದರಿಂದ ಬೇಸರವಾಗಲು ಶುರುವಾಗಿತ್ತು. ಹೊಸ ಯುದ್ಧ ಮಾಡೋಣ ಎಂದರೆ ಭರತಖಂಡದಲ್ಲಿ ಅವನು ಗೆಲ್ಲದ ರಾಜರೇ ಇರಲಿಲ್ಲ. ಅದೂ ಅಲ್ಲದೇ ಕಿರಿಯ ರಾಣಿಗೆ ಶೌರ್ಯರಸಕ್ಕಿಂತ ಶೃಂಗಾರ ರಸದತ್ತ ಹೆಚ್ಚು ಒಲವು. ಮಹಾರಾಜನು ಪ್ರಣಯಭರಿತ ನುಡಿಗಳನ್ನು ಆಡಲಿ ಎಂದು ಆಶಿಸುವಳು. ರಾಜನಿಗೆ ತನ್ನ ಶೌರ್ಯ ಮತ್ತು ಉಡುಗೊರೆಗಳಿಂದ ರಾಣಿಯರನ್ನು ವಶಪಡಿಸಿಕೊಳ್ಳುವುದು ಗೊತ್ತಿತ್ತೇ ಹೊರತು ರಸಿಕತನದಿಂದ